**0103/2043/0522/1403/1531/1611/1711**

**I Semester 3 Yr. LL.B./V Semester 5 Yr. B.A. LL.B./B.B.A. LL.B./ B.Com. LL.B./B.A. LL.B. (Maj.-Min. System) Examination, Jan./Feb. 2025 (Odd Sem.)**

# LAW OF TORTS

Duration : 3 Hours　　　　Max. Marks : 100

**Instructions :** 1. **Answer Q. No. 9 and any five of the remaining questions.**
2. **Q. No. 9 carries 20 marks and the remaining questions carry 16 marks each.**
3. **Answers should be written either in English or Kannada completely.**

Q. No. 1. Describe the nature of tort and distinguish it from contract and crime. Marks : 16

ಅಪಕೃತ್ಯದ ಸ್ವರೂಪವನ್ನು ವಿವರಿಸಿ ಮತ್ತು ಕರಾರು ಮತ್ತು ಅಪರಾಧಗಳಿಂದ ಇದನ್ನು ವಿಂಗಡಿಸಿರಿ.

Q. No. 2. Discuss the various exceptions to the rule that everyone can be sued in tort. Marks : 16

ಅಪಕೃತ್ಯದಲ್ಲಿ ಎಲ್ಲ ವ್ಯಕ್ತಿಗಳೂ ದಾವೆಗೆ ಗುರಿಯಾಗ ಬಲ್ಲರು ಎಂಬ ಸಾಮಾನ್ಯ ನಿಯಮಕ್ಕಿರುವ ವಿವಿಧ ಅಪವಾದಗಳನ್ನು ಚರ್ಚಿಸಿರಿ.

Q. No. 3. Discuss the principle of remoteness of damage with special reference to the cases of "Repolemis" and the "wagon mound". Marks : 16

''ರಿ ಪೊಲೆಮಿಸ್'' ಹಾಗೂ ''ವೇಗನ್ ಮೌಂಡ್'' ಪ್ರಕರಣಗಳ (ತೀರ್ಮಾನಗಳ) ವಿಶೇಷ ಪರಾಮರ್ಶೆಯೊಂದಿಗೆ ಹಾನಿಯ ದೂರತ್ವ (ಅತಿದೂರ ನಷ್ಟದ) ತತ್ವವನ್ನು ಚರ್ಚಿಸಿರಿ.

Q. No. 4. Define assault and battery and explain the difference between them. Marks : 16

''ಹಲ್ಲೆ'' ಮತ್ತು ''ಪ್ರಹಾರ''ವನ್ನು ವ್ಯಾಖ್ಯಾನಿಸಿರಿ ಮತ್ತು ಅವೆರಡರಲ್ಲಿರುವ ವ್ಯತ್ಯಾಸವನ್ನು ವಿವರಿಸಿರಿ.

Q. No. 5. Explain vicarious liability. What are the circumstances in which the master will be liable for the acts of his servant. Marks : 16

ಬದಲಿ ಹೊಣೆಗಾರಿಕೆಯನ್ನು ವಿವರಿಸಿ. ಯಾವ ಸಂದರ್ಭಗಳಲ್ಲಿ ಮಾಲೀಕನು ಸೇವಕನು ಮಾಡಿದ ಕೃತ್ಯಗಳಿಗೆ ಹೊಣೆಗಾರನಾಗುತ್ತಾನೆ ?

Q. No. 6. Discuss the liability of an occupier of premises towards a tresspasser, licensee and an invitee. Marks : 16

ಆವರಣಗಳ ಅಧಿಭೋಗದಾರನಿಗೆ ಅತಿಕ್ರಮಣಕಾರ, ಪರವಾನಿಗೆದಾರ ಮತ್ತು ಆಮಂತ್ರಿತ ಇವರುಗಳ ವಿಷಯದಲ್ಲಿಯ ಹೊಣೆಗಾರಿಕೆಯನ್ನು ಚರ್ಚಿಸಿರಿ.

Q. No. 7. Explain the composition, powers and functions of the 'National Commission' under Consumer Protection Act, 1986. Marks : 16

ಗ್ರಾಹಕ ಸಂರಕ್ಷಣ ಅಧಿನಿಯಮ, 1986ರಡಿಯಲ್ಲಿನ 'ರಾಷ್ಟ್ರೀಯ ಆಯೋಗ'ದ ರಚನೆ, ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.

Q. No. 8. Write short notes on **any two** of the following : Marks : 2×8=16

ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) Innuendo

ವಕ್ರೋಕ್ತಿ

(b) Conversion

ಪರಿವರ್ತನೆ

(c) Act of God.

ದೈವಿಕ ಕೃತ್ಯ.

Q. No. 9. Solve **any two** of the following problems : Marks : 2×10=20

ಈ ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಪರಿಹರಿಸಿರಿ :

(a) The owner had entrusted his car to a driver for plying it as a taxi. The driver lent the taxi to the cleaner for taking it to the R.T.O.'s office for driving test. Discuss the liability of the owner for an accident committed by the cleaner during the test.

ಒಬ್ಬ ಮಾಲೀಕನು ಅವನ ಚಾಲಕನಿಗೆ ತನ್ನ ಕಾರನ್ನು ಟ್ಯಾಕ್ಸಿಯನ್ನಾಗಿ ಓಡಿಸಲು ಕೊಡುತ್ತಾನೆ. ಚಾಲಕನು ಆ ಕಾರನ್ನು ಚಾಲಕ ಪರೀಕ್ಷೆಗಾಗಿ ರಸ್ತೆ ಸಾರಿಗೆ ಕಚೇರಿಗೆ ಹೋಗಲು ಕ್ಲೀನರ್‌ಗೆ ಕೊಡುತ್ತಾನೆ. ಚಾಲಕ ಪರೀಕ್ಷೆ ನಡಿಯುತ್ತಿದ್ದಾಗ ಕ್ಲೀನರ್‌ನಿಂದ ಆದ ಅಪಘಾತಕ್ಕೆ ಮಾಲೀಕನ ಬಾಧ್ಯತೆಯನ್ನು ಚರ್ಚಿಸಿ.

(b) The defendant, by way of practical joke, falsely represented to the plaintiff that her husband had met with a serious accident whereby both his legs were broken. By reason of this representation, the plaintiff suffered a violent nervous shock and was seriously ill and her hair turned into white and her life was for sometime in great danger. Her husband had to incur expenses for medical treatment for her. Is defendant liable ? Decide.

ಪ್ರತಿವಾದಿಯು ತಮಾಷೆಗೆಂದು ವಾದಿಗೆ ಅವಳ ಗಂಡನು ಅಪಘಾತಕ್ಕೆ ಬಲಿಯಾದನೆಂದು, ಅವನ ಎರಡು ಕಾಲುಗಳು ಕತ್ತರಿಸಿ ಹೋಗಿವೆ ಎಂದು ಸುಳ್ಳು ಹೇಳಿದನು. ಈ ಸುದ್ದಿ ಕೇಳಿದ ತಕ್ಷಣ ವಾದಿಯು ಅತ್ಯಂತ ತೀವ್ರತರ ಮಾನಸಿಕ ಅಪಘಾತಕ್ಕೆ ಒಳಗಾದಳು. ಅವಳ ಕೂದಲುಗಳು ಸಂಪೂರ್ಣ ಬೆಳ್ಳಗಾದವು ಮತ್ತು ಕೆಲ ಸಮಯದವರೆಗೆ ಅವಳ ಜೀವಕ್ಕೆ ಅಪಾಯವಿತ್ತು . ಅವಳ ಗಂಡನು ಅವಳ ಔಷಧೋಪಚಾರಕ್ಕೆ ಹಣವನ್ನು ಖರ್ಚು ಮಾಡಬೇಕಾಯಿತು. ಇದಕ್ಕೆ ಪ್ರತಿವಾದಿಯು ಹೊಣೆಗಾರನೆ ? ನಿರ್ಧರಿಸಿ.

(c) During a cricket match, a batsman hit a ball, which struck and injured A, who was standing on the adjoining highway. A sued the cricket club for negligence. Evidences disclosed that very rarely a ball hit over the fence that protected the cricket field. Will A succeed ?

ಕ್ರಿಕೆಟ್ ಆಡುವಾಗ ಬ್ಯಾಟ್ಸ್‌ಮ್ಯಾನ್‌ನು ಚೆಂಡನ್ನು ಜೋರಾಗಿ ಹೊಡೆದನು. ಆ ಚೆಂಡು 'ಎ'ನಿಗೆ ಗಾಯಗೊಳಿಸಿತು. 'ಎ'ನು ಹತ್ತಿರದ ಹೆದ್ದಾರಿಯ ಬದಿಗೆ ನಿಂತಿದ್ದನು. 'ಎ'ನು ಕ್ರಿಕೆಟ್ ಕ್ಲಬ್ಬಿನ ಮೇಲೆ ನಿರ್ಲಕ್ಷತೆಯ ದಾವೆ ಹೂಡುತ್ತಾನೆ. ಆ ವಿಚಾರಣೆಯಲ್ಲಿ ಹಿಂದೆಂದೂ ಚೆಂಡು ಆಟದ ಮೈದಾನದ ರಕ್ಷಣೆ ಮಾಡುವ ಬೇಲಿಯನ್ನು ದಾಟಿ ಹೋಗಿರಲಿಲ್ಲವೆಂದು ಸಿದ್ಧವಾಗುತ್ತದೆ. 'ಎ'ನು ಜಯಗಳಿಸಬಹುದೆ ?

---